12.30 ಪಿ.ಎಂ

ಶ್ರೀ ಡಿ.ಬಿ. ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ, ಕೊನೆಯದಾಗಿ ನಾನು ಕೇಳತಕ್ಕಂಥದ್ದು ಏನೆಂದರೆ, ನೀವು ಎಲ್ಲಿ ಹೋದರೂ ಕೂಡ ಡಾಂಬರ್ ಏನು ಇದೆ ಅದು ಖಾಸಗಿಯಾಗಿ ಎಲ್ಲಿ ಬೇಕಾದರೂ ಸಿಗುವಂತಹ ಮಟ್ಟಕ್ಕೆ ಇದೆ. ನಮ್ಮ ಕ್ಷೇತ್ರದಲ್ಲಿ ಅನೇಕ ಕಡೆ ಇವತ್ತು ಡಾಂಬರ್ ಪ್ರೈವೇಟ್‌ನವರು ಕೊಂಡುಕೊಂಡಿರುವಂತಹ ಸಂದರ್ಭಗಳು ಬೇಕಾದಷ್ಟು ಇದೆ. ಅದಕ್ಕೋಸ್ಕರ ನಾನು ಹೇಳತಕ್ಕಂಥದ್ದು ಏನೆಂದರೆ ಇದರಲ್ಲಿ ಸಂಪೂರ್ಣವಾಗಿ ದುರುಪಯೋಗವಾಗಿದೆ. ನಾನು ಲಿಖಿತವಾಗಿ ಬರೆದುಕೊಡುವುದಕ್ಕಿಂತ ಹೆಚ್ಚಾಗಿ ನಾನು ಈ ಸದನದಲ್ಲಿ ಹೇಳುತ್ತಿರತಕ್ಕಂಥಾದ್ದನ್ನೇ ದಯವಿಟ್ಟು ಆಧಾರವಾಗಿ ಇಟ್ಟುಕೊಂಡು, ಸಮಗ್ರವಾಗಿ ತನಿಖೆ ಮಾಡಿಸಿ ಇದು ಸಂಪೂರ್ಣವಾಗಿ ಖರ್ಚಾಗಿದೆಯೇ ಇಲ್ಲವೇ ಎಂದು ತಾವು ತನಿಖೆ ಮಾಡಿಸಿದರೆ ತಮಗೆ ನಿಜಾಂಶ ಏನೆಂದು ಗೊತ್ತಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : 4259 ಮೆಟ್ರಿಕ್ ಟನ್ ಡಾಂಬರು ಸಂಪೂರ್ಣವಾಗಿ ದುರುಪಯೋಗಿದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ದುರುಪಯೋಗ ಆಗಿರಬಹುದು, ಮಾನ್ಯ ಸದಸ್ಯರು ಬರೆದು ತಿಳಿಸಲಿ, ಯಾವುದಾದರೂ ಭಾಗದಲ್ಲಿ ಯಾವುದೇ ರಸ್ತೆಯಲ್ಲಿ ಸರಿಯಾಗಿ ಆಗದೇ ಇರತಕ್ಕಂಥದ್ದು ಮಾಡಿದ್ದೇವೆಂದು ಹೇಳಿ ಬರೆದುಕೊಂಡು, ಅದು ಮಾಡದೇ ಇರತಕ್ಕಂಥದ್ದು ಇದ್ದರೆ ಇಂತದ್ದು, ಎಂದು ಬರೆದು ತಿಳಿಸಿದರೆ ನಾನು ವಿಚಾರಣೆ ಮಾಡಿಸುತ್ತೇನೆ.

ಅಧ್ಯಕ್ಷರು : ಶ್ರೀ ಡಿ.ಆರ್. ಪಾಟೀಲ್‌ರವರೆ ತಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

ಪ್ರಶ್ನೋತ್ತರ ಕಾಲ ಮುಗಿಯಿತು ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

(ಹಲವಾರು ಸದಸ್ಯರು ಸದನದ ಬಾವಿಗೆ ಬಂದರು)

(ಗೊಂದಲ)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ನೀಡಲಾದ ಉತ್ತರಗಳು

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ 9ನೇ ಪಟ್ಟಿಯಲ್ಲಿರುವ 52 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 4, 637, 651, 684, 232, 579ಎ, 349, 479, 558, 671, 557, 234, 529, ಈ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ 39 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಇಂಡಿ ತಾಲ್ಲೂಕಿನಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗಾಗಿ ಗುರುತಿಸಲಾದ ಹಳ್ಳಿಗಳು

44 - ಶ್ರೀ ಮನೋಹರ್ ಯು. ಐನಾಪುರ (ಬಳ್ಳೊಳ್ಳಿ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿನಲ್ಲಿ ಅಚ್ಚು ಕಟ್ಟು ಪ್ರದೇಶ ಅಭಿವೃದ್ಧಿಗಾಗಿ ಗುರುತಿಸಲಾದ ಹಳ್ಳಿಗಳ ಸಂಖ್ಯೆಗಳು

ಆ) ಪ್ರಸಕ್ತ ವರ್ಷದಲ್ಲಿ ಈ ಹಳ್ಳಿಗಾಗಿ ವೆಚ್ಚ ಮಾಡಿರುವ ಹಣ?

ಇ) *ಭಾಟಾ ಕುಂಕಿ, ಅಥರ್ಗ, ನಿಂಬಾಳ್ ಹಳ್ಳಿಗಳೇನಾದರೂ ಅಭಿವೃದ್ಧಿ ಕೆಲಸಗಳಲ್ಲಿ ಸೇರಿಸಲಾಗಿದೆಯೇ?*

ಶ್ರೀ ರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಇಂಡಿ ತಾಲ್ಲೂಕಿನಲ್ಲಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗಾಗಿ ಯಾವ ಹಳ್ಳಿಯನ್ನು ಗುರುತಿಸಲಾಗಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಕೃಷ್ಣ ಮತ್ತು ಕಾವೇರಿ ನೀರಾವರಿ ಯೋಜನೆಗಳ ಅನುಷ್ಠಾನ

636 - ಶ್ರೀ ವೈ.ಕೆ. ರಾಮಯ್ಯ (ಕುಣಿಕಲ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣಾ ಮತ್ತು ಕಾವೇರಿ ಜಲಾನಯನ ಪ್ರದೇಶದ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಈ ವರ್ಷ ಆಡಳಿತಾತ್ಮಕ ಮಂಜೂರಾತಿ ದೊರಕಿರುವ ಅಯವ್ಯಯದಲ್ಲಿ ಒದಗಿಸಿರುವ ಹಣದಲ್ಲಿ ಈ ವರೆಗೆ ಖರ್ಚಾಗಿರುವ ಹಣ ಎಷ್ಟು?*

ಆ) *ಸದರಿ ಯೋಜನೆಗಳ ಬಗ್ಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ ಎಷ್ಟು? (ಯೋಜನಾವಾರು ವಿವರಗಳನ್ನು ಒದಗಿಸುವುದು)*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ

	1993-94ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣ	1993-94ನೇ ಜೂಲೈ 93ರ ಅಂತ್ಯದವರೆಗೆ ಖರ್ಚಾಗಿರುವ ಹಣ. (ಕೋಟಿ ರೂ.ಗಳಲ್ಲಿ)
ಕೃಷ್ಣಾ ಕೊಳ್ಳದ ಯೋಜನೆ	415.29	110.99
ಕಾವೇರಿ ಕೊಳ್ಳದ ಯೋಜನೆ	282.50	75.56

ಆ) ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.